**ಕರ್ನಾಟಕ ಸರ್ಕಾರ**

ಸಂ: ಇಡಿ 107 ಯುಎನ್ಇ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:13.03.2020.

# ಸುತ್ತೋಲೆ

ವಿಷಯ: ರಾಜ್ಯಾದ್ಯಂತ ಕೊರೊನಾ ವೈರಸ್ ಹಾವಳಿಯನ್ನು ತಡೆಗಟ್ಟುವ ಬಗ್ಗೆ.

*****

ವಿಶ್ವದಾದ್ಯಂತ ಕೊರೊನಾ ವೈರಸ್ ಹಾವಳಿಯಿಂದ ಸಾವಿರಾರು ಜನರು ಮರಣ ಹೊಂದುತ್ತಿರುವುದನ್ನು ಗಮನಿಸಲಾಗಿದೆ. ವಿಶ್ವವಿದ್ಯಾಲಯಗಳಲ್ಲಿ ಹಾಗೂ ತಮ್ಮ ಆಡಳಿತ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೊರೊನಾ ವೈರಸ್ ಹಾವಳಿಯನ್ನು ತಪ್ಪಿಸಲು ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸಲು ಸೂಚಿಸಿದೆ.

- ಕೊರೊನಾ ವೈರಸ್ ಸಾಂಕ್ರಾಮಿಕ ರೋಗವಾಗಿದ್ದು, ಬಹುಬೇಗನೆ ಇನ್ನೊಬ್ಬರಿಗೆ ಹರಡಲಿರುವುದರಿಂದ, ಸೋಂಕು ಹರಡದಂತೆ ಹೆಚ್ಚಿನ ಜಾಗ್ರತೆ ವಹಿಸುವಂತೆ ಸೂಚಿಸುವುದು.
- ನೆಗಡಿ–ಕೆಮ್ಮು, 2–5 ದಿನದವರೆಗೂ ತಗ್ಗದ ಜ್ವರ, ವಾಂತಿ, ಉಸಿರಾಟದ ತೊಂದರೆ ಇವುಗಳು ಕೊರೊನಾ ವೈರಸ್‌ನ ರೋಗಲಕ್ಷಣಗಳಾಗಿವೆ.
- ಜನಸಂದಣಿ, ಸೂಕ್ಷ್ಮ ಪ್ರದೇಶಗಳಲ್ಲಿ ಮಾಸ್ಕನ್ನು ಕಡ್ಡಾಯವಾಗಿ ಬಳಕೆ ಮಾಡುವಂತೆ ಸೂಚಿಸುವುದು.
- ಸೀನುವಾಗ, ಕೆಮ್ಮುವಾಗ ಮಾಸ್ಕ್ ಬಳಸುವಂತೆ ಸೂಚಿಸುವುದು.
- ನೆಗಡಿ, ಕೆಮ್ಮು, ಜ್ವರ ಇರುವ ಅಸ್ವಸ್ಥ ಸಿಬ್ಬಂದಿ & ವಿದ್ಯಾರ್ಥಿಗಳಿಗೆ ಸಂಪೂರ್ಣ ಉಪಶಮನವಾಗುವವರೆಗೆ ರಜೆ ವ್ಯವಸ್ಥೆ ಕಲ್ಪಿಸುವುದು ಹಾಗೂ ಕಾಲೇಜುಗಳಿಗೆ/ಕರ್ತವ್ಯಕ್ಕೆ ಹಿಂದಿರುಗಿದಾಗ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಬೇಕೆಂದು ಸೂಚಿಸುವುದು.
- ವೈದ್ಯಕೀಯ ನೆರವಿಗೆ ಆರೋಗ್ಯ ಇಲಾಖೆಯು ಸಜ್ಜುಗೊಂಡಿದ್ದು, ಸೂಕ್ತ ಮುನ್ನೆಚ್ಚರಿಕೆ ಕ್ರಮ ಅನುಸರಿಸುವ ಮೂಲಕ ವೈರಸ್ ಹರಡದಂತೆ ಎಚ್ಚರಿಕೆ ವಹಿಸುವುದು.
- ಏರ್‌ಪೋರ್ಟ್, ಅನ್ಯರಾಜ್ಯ ಹಾಗೂ ವಿದೇಶದಿಂದ ಆಗಮಿಸುವ ವಿದ್ಯಾರ್ಥಿಗಳಿಗೆ ವೈದ್ಯ ಪರೀಕ್ಷೆ ಕಡ್ಡಾಯಗೊಳಿಸುವುದು.
- ಶುದ್ಧೀಕರಿಸಿದ ನೀರನ್ನು ಬಳಸುವುದು ಹಾಗೂ ವಿಶ್ವವಿದ್ಯಾಲಯ/ಕಾಲೇಜು ಆವರಣ ಮತ್ತು ಸುತ್ತಮುತ್ತಲಿನ ಪರಿಸರದಲ್ಲಿ ಸ್ವಚ್ಚತೆಯನ್ನು ಕಾಪಾಡುವುದು.
- ರೋಗಲಕ್ಷಣ/ಮುನ್ನೆಚ್ಚರಿಕೆ ಕ್ರಮಗಳ ಕುರಿತು ವಿಶ್ವವಿದ್ಯಾಲಯ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ನಾಮಫಲಕಗಳನ್ನು ಅಳವಡಿಸಲು ಕ್ರಮವಹಿಸುವುದು.

(ಎನ್.ವೀರಬ್ರಹ್ಮಚಾರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು–01)

ಗೆ,

1. ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು/ಕುಲಸಚಿವರು (ಆಡಳಿತ).
2. ಎಲ್ಲಾ ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳ ಕುಲಪತಿಗಳು.
3. ಮಾನ್ಯ ಉನ್ನತ ಶಿಕ್ಷಣ ಮಂತ್ರಿರವರ ಕಾರ್ಯದರ್ಶಿಯವರು, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ.